# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ</u>

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 3

ಸಿ.ಡಬ್ಲ್ಯೂಃ 2

ಸಾಕ್ಷಿದಾರರ ಹೆಸರು : ನಾಗರಾಜ

ತಂದೆಯ ಹೆಸರು : ರಮೇಶ್ ರಾಠೋಡ್

ವಯಸ್ಸು : 27 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಬಿಜಾಪುರ .

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 03-07-2023.

## <u>ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ</u>

ನನಗೆ ಚಾಸಾ.1, 6 ಮತ್ತು 8 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ನಿಪಿ.2 ನ್ನು ನೋಡಿ ಗುರುತಿಸುತ್ತೇನೆ. ನಿಪಿ.2 ಕ್ಕೆ ನಾನು ರಾಮನಾಥ ದೇವಸ್ಥಾನ ಕ್ರಾಸ್ ಹತ್ತಿರ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.1 ಮತ್ತು 3 ರವರು ಸಹ ಹಾಜರಿದ್ದರು. ನಿಪಿ.2 ಕ್ಕೆ ನಾನು ದಿನಾಂಕಃ 04.02.2019 ರಂದು ಸಹಿ ಮಾಡಿರುತ್ತೇನೆ. ಅಪಘಾತವಾದ ಕಾರಣ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ.2 ರಲ್ಲಿರುವ ಸಹಿ ನನ್ನದೇ ಆಗಿದ್ದು, ಗುರುತಿಸುತ್ತೇನೆ. ನನ್ನ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ನಿಪಿ.3 ನ್ನು ನೋಡುತ್ತಿದ್ದು , ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.3 ಸಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ನಿಪಿ.4 ನ್ನು ನೋಡಿ ಗುರುತಿಸುತ್ತೇನೆ. ನಿಪಿ.2 ನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿರುತ್ತಾರೆಂದು ನನಗೆ ನೆನಪಿಲ್ಲಾ. ಸುಮಾರು ವರ್ಷ ಕಳೆದಿದೆ. ಪೋಲೀಸರು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿದ್ದೇನೆ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

2. ದಿನಾಂಕಃ 04.02.2019 ರಂದು ಪೋಲೀಸರು ಚಾಸಾ.1 ರವರಿಗೆ ಘಟನಾ ಸ್ಥಳ ತೋರಿಸಿದ್ದು, ದಿನಾಂಕಃ 03.02.2019 ರಂದು ಸಂಜೆ 6.30 ಗಂಟೆಗೆ ಅಪಘಾತವಾಗಿತ್ತು , ಈ ಬಗ್ಗೆ ಪೋಲೀಸರು ನಿಪಿ.2 ನ್ನು ಸದರಿ ದಿನದಂದು 11.00 ರಿಂದ 12.00 ಗಂಟೆಯುವರೆಗೆ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ, ಪೋಲೀಸರು ನನಗೆ ಸಹಿ ಮಾಡು ಎಂದಿದ್ದರಿಂದ ನಾನು ಸಹಿ ಮಾಡಿದ್ದೇನೆ. ನಮ್ಮ ಊರು ಬಿಜಾಪುರ ಆಗಿದ್ದು, ಕಾರವಾರದಲ್ಲಿ ಚಾಲಕನಾಗಿ ಮತ್ತು ರಸ್ತೆ ನಿರ್ಮಾಣ ಕೆಲಸಕ್ಕೆ ಸುಮಾರು 5 –6 ತಿಂಗಳು ಇದ್ದೆನು. ಯಾವ ತಿಂಗಳಿಗೆ ಕೆಲಸಕ್ಕೆ ಬಂದು ಯಾವ ತಿಂಗಳಿನಲ್ಲಿ ಊರಿಗೆ ಹೋಗಿದ್ದೆನು ಎಂದು ನೆನಪಿಲ್ಲಾ. ನಾನು ಕೆಲಸ ಮಾಡುತ್ತಿದ್ದ ಮಾಲೀಕರ ಹೆಸರು ರೆಡ್ಡಿ . ನಾನು ಹಗಲು ಹೊತ್ತು ಕೆಲಸ ಮಾಡುತ್ತಿದ್ದೆ. ಎಷ್ಟು ಗಂಟೆಯಿಂದ ಎಷ್ಟು ಗಂಟೆಯುವರೆಗೆ ಕೆಲಸ ಮಾಡುತ್ತಿದ್ದೆ ನೆನಪಿಲ್ಲಾ. ನಾನು ಕಾರವಾರದಲ್ಲಿದ್ದಾಗ ರಾಮನಾಥ ದೇವಸ್ಥಾನದ ಹತ್ತಿರ ಶೆಡ್ ನಲ್ಲಿ ಇರುತ್ತಿದ್ದೆವು. ಅಪಘಾತವಾದ ಬಗ್ಗೆ ನನಗೆ ಯಾರೋ ತಿಳಿಸಿದರು. ಅವರ ಹೆಸರು ನನಗೆ ಗೊತ್ತಿಲ್ಲಾ. ಆರೋಪಿಯು ಮೃತ ವ್ಯಕ್ತಿ ರವಿ ಅವರಿಗೆ ತಮ್ಮ ವಾಹನವನ್ನು ಹಾಯಿಸಿ ಅಪಘಾತಪಡಿಸಿದ್ದು , ರವಿ ಅವರು ತೀರಿಕೊಂಡಿರುತ್ತಾರೆ ಎಂದು ಚಾಸಾ.1 ರವರು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.5 ರಲ್ಲಿ ನಾನು ಇರುತ್ತೇನೆ. ನಿಪಿ.4 ಮತ್ತು 5 ರಲ್ಲಿ ಕಾಣಿಸಿದ ಜಾಗ ಘಟನಾ ಸ್ಥಳದ ಎಂದರೆ ಸರಿ. ಅಪಘಾತ ಪಡಿಸಿದ ವಾಹನ ಸಂಖ್ಯೆ ಜಿ ಎ 08 ವೈ 1243 ಎಂದರೆ ಸರಿಯಲ್ಲ. ನಿಪಿ.4 ಕಾಣಿಸುವ ವಾಹನ ಅಪಘಾತಪಡಿಸಿದ ವಾಹನ ಎಂದರೆ ನನಗೆ ಗೊತ್ತಿಲ್ಲಾ ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಸಿ ಡಿ ಎನ್ ವಕೀಲರಿಂದಃ**

3. ನಿಪಿ.4 ಮತ್ತು 5 ನ್ನು ಯಾರು ತೆಗೆದರು ಮತ್ತು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲಾ. ನಿಪಿ.3 ರಲ್ಲಿ ಕಾಣಿಸುವ ನನ್ನ ಸಹಿಯನ್ನು ಪೋಲೀಸರು ಖಾಲಿ ಹಾಳೆಯ ಮೇಲೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನಿಪಿ.2 ರ ಬಗ್ಗೆ ನನಗೆ ಗೊತ್ತಿಲ್ಲಾ , ಪೋಲೀಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆಃ – ಇಲ್ಲಾ –**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )**

**ಓ.ಹೇ.ಕೆ. ಸರಿ ಇದೆ.**

**ಹೆ .ದ.ನಾ.ದಂ. ಕಾರವಾರ.**